ಒಪ್ಪಿಸಲು ಹೇಳುತ್ತೇನೆ. ಅಕಸ್ಮಾತ್ ಕಳಪೆ ಕಾಮಗಾರಿಯಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ರಾಜಶೇಖರ ಶೀಲವಂತ : ಜಿಲ್ಲಾಧಿಕಾರಿಗಳಿಂದ ತನಿಖೆ ಮಾಡಿಸಿರಿ.

ಶ್ರೀ ಎಂ.ಸಿ.ಪ್ರಕಾಶ್: ಜಿಲ್ಲಾಧಿಕಾರಿಗಳಿಂದಲೇ ತನಿಖೆ ಮಾಡಿಸುತ್ತೇನೆ.

1587

ಶ್ರೀ ಯು.ಬಿ.ಬಣಕಾರ್: ಮಾನ್ಯ ಅಧ್ಯಕ್ಷರೆ, ಪ್ರಶ್ನೆ 1587ನ್ನು ಕೇಳುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಜವಳಿ ಸಚಿವರು): ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನಾಳೆ ಒದಗಿಸುತ್ತೇನೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಶ್ರೀನಿಧಿ ಬಡಾವಣೆಯಲ್ಲಿ ಸೌಕರ್ಯಗಳ ಕೊರತೆ.

308(1992)

ಶ್ರೀ ಎಸ್.ಆಂಗಾರ್(ಸೂಳ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್‌ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೊತ್ತನೂರು: ಮತ್ತು ಚುಂಚಘಟ್ಟ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ಶ್ರೀನಿಧಿ ಬಡಾವಣೆಯಲ್ಲಿ ಕನಿಷ್ಠ ಮೂಲಭೂತ ಸೌಕರ್ಯಗಳಾದ ರಸ್ತೆ, ಬೀದಿ ದೀಪ, ಚರಂಡಿ, ಒಳಚರಂಡಿ ವ್ಯವಸ್ಥೆ ಮುಂತಾದವು ಇಲ್ಲದಿರುವುದರಿಂದ ಆ ಬಡಾವಣೆಯ ನಾಗರೀಕರು ಎದುರಿಸುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಬಡಾವಣೆಯ ನಿವಾಸಿಗಳು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು?

ಇ) ಶ್ರೀನಿಧಿ ಬಡಾವಣೆಯ ಜೊತೆಗೆ ಸುತ್ತಮುತ್ತಲಿನ ಸೌಧಾಮನಿ ಬಡಾವಣೆ, ಆರ್‌ಬಿಐ. ಬಡಾವಣೆ, ಗೌರವ ನಗರ, ಕೃಷ್ಣನಗರ ಮುಂತಾದ ಬಡಾವಣೆಗಳನ್ನು ಬೊಮ್ಮನಹಳ್ಳಿ ನಗರಸಭೆಯ ವ್ಯಾಪ್ತಿಗಾಗಲೀ, ಬೆಂಗಳೂರು ಮಹಾನಗರಪಾಲಿಕೆಯ

ವ್ಯಾಪ್ತಿಗಾಗಲೀ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗಾಗಲಿ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳು ಯಾವುವು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು.

ಆ) ಶ್ರೀನಿಧಿ ಬಡಾವಣೆಯು ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೋಣನಕುಂಟೆ ಮತ್ತು ಕೊತ್ತನೂರು ಗ್ರಾಮಪಂಚಾಯತ್‌ಗೆ ಸೇರಿದ್ದು, ಒಂದು ಅನಧಿಕೃತ ಬಡಾವಣೆಯಾಗಿರುತ್ತದೆ. ಆದವರೂ ಈ ಬಡಾವಣೆಗೆ ಮೂಲಭೂತ ಸೌಕರ್ಯಗಳಾದ ಬೀದಿ ದೀಪ ಮತ್ತು ಚರಂಡಿ ವ್ಯವಸ್ಥೆಯನ್ನು ಸದರಿ ಗ್ರಾಮಪಂಚಾಯಿತಿಗಳ ಮೂಲಕ ಒದಗಿಸಲಾಗಿರುತ್ತದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಸ್.ಅಂಗಾರ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಸರಿಯಾಗಿ ಒದಗಿಸಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಶ್ರೀನಿಧಿ ಬಡಾವಣೆ, ಕೃಷ್ಣನಗರ, ಗೌರವ ನಗರ, ರಿಸರ್ವ್‌ಬ್ಯಾಂಕ್ - ಎಂದು ಹೇಳಿ ಇದೇ ತರಹದ ಪ್ರಶ್ನೆಯನ್ನು ಅಲ್ಲಿ ಮೇಲ್ಮನೆಯಲ್ಲಿ ಇಂಗ್ಲೀಷ್‌ನಲ್ಲಿ ಕೇಳಿದ್ದಾರೆ, ಇಲ್ಲಿ ಕನ್ನಡದಲ್ಲಿ ಕೇಳಿದ್ದಾರೆ. ಪ್ರಾಯಶಃ ಮಾನ್ಯ ಸದಸ್ಯರಿಗೆ ಸಂಬಂಧಪಟ್ಟಿರತಕ್ಕಂಥ ಏರಿಯಾದ್ದು ಅಲ್ಲ. ಆದರೂ ಕೂಡ ಗೃಹನಿರ್ಮಾಣ ಸಂಘದವರು ಇದನ್ನು ಹಾಕಿಸಿರಬಹುದು. ರಿಸರ್ವ್‌ಬ್ಯಾಂಕ್‌ನವರು ಮಾಡಿದ ಬಡಾವಣೆಗೆ ವಿದ್ಯುತ್, ದೀಪ, ಚರಂಡಿ ಮುಂತಾಗಿ ಎಲ್ಲಾ ವ್ಯವಸ್ಥೆಯನ್ನು ಮಾಡಿಸಿದ್ದೇವೆ. ಅನಧಿಕೃತವಾಗಿ ನಿರ್ಮಿಸಿದ ಬಡಾವಣೆಗಳಾದ ಶ್ರೀನಿಧಿ, ಕೃಷ್ಣಾನಗರ, ಎಂಬ ಬಡಾವಣೆಗಳು ಏನಿವೆ, ಅಲ್ಲಿನ ಕೊತ್ತನೂರು ಗ್ರಾಮಪಂಚಾಯತಿಗೆ ಈಗಾಗಲೇ ಹೇಳಿಕಳುಹಿಸಿದ್ದೇವೆ. ಅವರಿಗೆ ಸಿವಿಕ್ ಅಮಿನಿಟೀಸ್‌ನ್ನು ಮಾಡಿಕೊಡಿ ಎಂದು ಹೇಳಿದ್ದೇವೆ.